RNU AIR DHARWAD

**MAY 05,2025**

**ALL INDIA RADIO- DHARWAD**

**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ವಿವಿಧ ಸಮುದಾಯದ ವಿದ್ಯಾರ್ಥಿಗಳು ಒಂದೇ ವಸತಿ ನಿಲಯದಲ್ಲಿ, ಜೊತೆಯಲ್ಲಿ, ಶಿಕ್ಷಣ, ಕಲಿಕೆ ಮಾಡುವ ಮೂಲಕ ಸಮಾಜದಲ್ಲಿ ಏಕೀಕೃತ ಭಾವ ಮೂಡಲು ಸಾಧ್ಯವಿದೆ ಎಂದು ವಿಧಾನಸಭೆ, ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ಹೇಳಿದರು. ಧಾರವಾಡ ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜರುಗಿದ ಮಹರ್ಷಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಧಾರವಾಡದಲ್ಲಿ ಸಾವಿರ ವಿದ್ಯಾರ್ಥಿಗಳು ತಂಗಲು ವ್ಯವಸ್ಥೆ ಕಲ್ಪಿಸುವ, ಇಂಟಿಗ್ರೇಟೆಡ್ ಹಾಸ್ಟೆಲ್ ನಿರ್ಮಾಣವಾಗುತ್ತಿದ್ದು, ಶೀಘ್ರದಲ್ಲೇ ಲೋಕಾರ್ಪಣೆಯಾಗಲಿದೆ ಎಂದರು.**

<><><>

**ಧ್ವನಿ: ಅರವಿಂದ ಬೆಲ್ಲದ 32 ಸೆಕೆಂದುಗಳು**

<><><>

**ಇಂದು ಪರಿಶಿಷ್ಟ ಜಾತಿಯ, ಒಳ ಮೀಸಲಾತಿ ಗಣತಿಗೆ ಚಾಲನೆ ದೊರೆಯಲಿದೆ. ಗಣತಿದಾರರು ಇದೇ 17ರ ವರೆಗೆ, ರಾಜ್ಯಾದ್ಯಂತ, ಮನೆಗಳಿಗೆ ಭೇಟಿ ನೀಡಿ, ಸಮೀಕ್ಷಿಸಲಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ, ಸಮೀಕ್ಷಕರು ನಾಳೆಯಿಂದ ಮನೆ ಮನೆಗಳಿಗೆ ಭೇಟಿ ನೀಡಿ ದತ್ತಾಂಶ ಶೇಖರಣೆ ನಡೆಸಲಿದ್ದಾರೆ. ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಸಮೀಕ್ಷೆ ಹಿನ್ನೆಲೆ, ವಿಶೇಷ ನಿಯಂತ್ರಣ ಕೊಠಡಿ ತೆರೆಯಲಾಗಿದೆ.**

<><><>

**ರವೀಂದ್ರನಾಥ ಠಾಕೂರ ಅವರ ಶಾಂತಿ ನಿಕೇತನ ಹಾಗೂ ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ, ಕರಕುಶಲ ವೃತ್ತಿ ತರಬೇತಿ ನೀಡಲಾಗುತ್ತಿತ್ತು ಎಂದು, ಚಿಂತಕ ರೆಹಮತ್ ತರೀಕೆರೆ ಹೇಳಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ದೇವರ ದಾಸಿಮಯ್ಯ ಜಯಂತ್ಯುತ್ಸವದಲ್ಲಿ, 'ನೇಕಾರ ಸಂಸ್ಕೃತಿ ಹಾಗೂ ಧರ್ಮ' ಕುರಿತು ಮಾತನಾಡಿದರು. ಕಲ್ಯಾಣ ಪಟ್ಟಣದಲ್ಲಿ, ಸಾಮಾನ್ಯ ವ್ಯಕ್ತಿಗಳು ಗುರುದೀಕ್ಷೆ ಪಡೆದು, ಅಸಾಮಾನ್ಯ ಸಾಧಕರಾದರು. ಕಲ್ಯಾಣ ಕುಶಲಕರ್ಮಿಗಳ ಕೇಂದ್ರವೇ ಆಗಿತ್ತು. ಅವರ ಕಾಯಕ ನಿಷ್ಠೆ, ವೃತ್ತಿ ಧರ್ಮದ ಬದ್ಧತೆ, ಬಸವಣ್ಣನವರಿಗೆ ಘನತೆಯನ್ನು ತಂದುಕೊಟ್ಟರು. ನೇಕಾರಿಕೆ ವೃತ್ತಿ ಸಮನ್ವಯತೆ ಮತ್ತು ಸಾಮರಸ್ಯ ಬಯಸುತ್ತದೆ' ಎಂದರು.**

<><><>

ಮಂಗಳೂರಿನ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ, ಸಮಾರೋಪಗೊಂಡ, 24ನೇ ರಾಜ್ಯ ಮಟ್ಟದ ವುಶು ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ, ವಿಜಯನಗರ ಜಿಲ್ಲೆ, ವುಶು ಪಟುಗಳು, 4 ಚಿನ್ನ ಹಾಗೂ 3 ಕಂಚಿನ ಪದಕ ಗಳಿಸಿದ್ದಾರೆ.ಎಸ್.ಅಖಿಲ್, ಅಂಕಿತ, ವಿಜಯಕುಮಾರ ಹಾಗೂ ಗಣೇಶ್ ಚಿನ್ನದ ಪದಕ ಗಳಿಸಿ, ರಾಷ್ಟ್ರ ಮಟ್ಟದ ವುಶು ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.ಎಸ್. ತಿಪ್ಪೇಸ್ವಾಮಿ ಅವರ ಬಳಿ, ತರಬೇತಿ ಪಡೆಯುತ್ತಿದ್ದಾರೆ.

<><><>

ಕೋಲಾರ ಜಿಲ್ಲೆಯಾದ್ಯಂತ, ಮುಂಗಾರು ಆರಂಭಗೊಂಡ ಹಿನ್ನೆಲೆ, ಹೊನ್ನೇಗಿಲು ಹೂಡುವ ಸಂಪ್ರದಾಯಕ್ಕೆ, ಅರಾಭಿಕೊತ್ತನೂರು ಗ್ರಾಮದಲ್ಲಿ, ಗ್ರಾಮದ ಮುಖಂಡ ಜಯರಾಮೇಗೌಡ ಚಾಲನೆ ನೀಡಿದರು. ಜೋಡೆತ್ತು ಕಟ್ಟಿದ ಹೊನ್ನೇಗಿಲಿಗೆ, ಗ್ರಾಮ ದೇವತೆ ಶ್ರೀ ಪಟಾಲಮ್ಮ ದೇವಾಲಯದ ಆವರಣದಲ್ಲಿ, ಗ್ರಾಮಸ್ಥರು ವಿಧಿವತ್ ಪೂಜೆ ಸಲ್ಲಿಸಿದರು. ಹೊನ್ನೇಗಿಲು ಪೂಜೆ ನಂತರ, ಒಂದು ಸುತ್ತು ಉಳುಮೆ ಮಾಡಿ, ಸಮೃದ್ಧ ಬೆಳೆಗೆ ಪ್ರಾರ್ಥಿಸಿ, ಈ ಸಾಲಿನ ಕೃಷಿ ಚಟುವಟಿಕೆಗಳಿಗೆ, ಕೃಷಿಕರು ಚಾಲನೆ ನೀಡಿದರು.

<><><>

ಹಾಸನ ನಗರದಲ್ಲಿ ಆಯೋಜಿತವಾಗಿರುವ ಮೂರು ದಿನಗಳ ಯೋಗ ತರಬೇತಿ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಲಾಯಿತು. ಹರಿದ್ವಾರದ ಪತಂಜಲಿ ಯೋಗ ಪೀಠದ ವತಿಯಿಂದ ಆಯೋಜಿತ ಯೋಗ ತರಬೇತಿ ಕಾರ್ಯಕ್ರಮಕ್ಕೆ ಯೋಗ ಪೀಠದ ಕೇಂದ್ರೀಯ ಪ್ರಭಾರಿ ಪರಮಾರ್ಥ ದೇವ ಜಿ ನೇತೃತ್ವ ವಹಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆ, ಅಚ್ಚೋಲಾ ತಾಂಡಾದ ಬಳಿ ಮೂರು ಜನ ಕುರಿಗಾಹಿ ಬಾಲಕರು ನೀರಿನ ಹೊಂಡದಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ಸಂಭವಿಸಿದೆ. ನೀರು ಕುಡಿಯಲು ತೆರಳಿದ್ದ ಸಂದರ್ಭ ಕಾಲುಜಾರಿ ನೀರಿಗೆ ಬಿದ್ದಿರಬಹುದು ಎಂದು ಶಂಕಿಸಲಾಗಿದೆ.

<><><>

ಕೇಂದ್ರ ಚುನಾವಣಾ ಆಯೋಗ, ಶೀಘ್ರ ಏಕಾಂಶದ ಆ್ಯಪ್, 'ಇ.ಸಿ.ಐ.ಎನ್,ಇ.ಟಿ.'ಗೆ ಚಾಲನೆ ನೀಡಲಿದೆ. ಈ ಹೊಸ ವೇದಿಕೆ, ಚುನಾವಣಾ ಆಯೋಗದ ಈಗಿರುವ, ಮತದಾರರ ಪಾಲ್ಗೊಳ್ಳುವಿಕೆ, ಮತದಾರ ಸಹಾಯವಾಣಿ, ಸಿ–ವಿಜಿಲ್, ಸುವಿಧಾ, ಕೆ.ವೈ.ಸಿ. ಸೇರಿದಂತೆ, 40ಕ್ಕೂ ಹೆಚ್ಚು ಆ್ಯಪ್‌ಗಳ ಒಳಗೊಳ್ಳುವಿಕೆಯನ್ನು ನಿವಾರಿಸಿ, ಒಂದೇ ವೇದಿಕೆಯಲ್ಲಿ, ಕರಾರುವಾಕ್ ದತ್ತಾಂಶಗಳನ್ನು, 'ಇ.ಸಿ.ಐ.ಎನ್.,ಇ.ಟಿ.' ಆ್ಯಪ್ ಒದಗಿಸಲಿದೆ.

<><><>

ರಾಜ್ಯದ ಬೆಳಗಾವಿ, ಹುಬ್ಬಳ್ಳಿ ಮತ್ತು ಮೈಸೂರಲ್ಲಿ ಹಿರಿಯ ನಾಗರಿಕರಿಗಾಗಿ ಕ್ಲಬ್ ಆರಂಭಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ. ಬೆಳಗಾವಿಯ ಕುಮಾರಸ್ವಾಮಿ ಬಡಾವಣೆಯಲ್ಲಿ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಬಜೆಟ್ ನಲ್ಲಿ ಓಲ್ಡ್ ಏಜ್ ಕ್ಲಬ್ ಗೆ ಅನುಮೋದನೆ ನೀಡಲಾಗಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.